Buddivant Ramakrishna ( ಬುದ್ಧಿವಂತ ರಾಮಕೃಷ್ಣ)

Notebook activity

ಮೌಲ್ಯ: "ವಿದ್ಯೆ ವಿನಯವನ್ನು ಕಲಿಸುತ್ತದೆ, ಬುದ್ಧಿ ವಿವೇಕವನ್ನು ಕಲಿಸುತ್ತದೆ."

---

ಪದಗಳ ಅರ್ಥ

೧. ವಾದ - ಚರ್ಚೆ

೨. ಅಪ್ಪಣೆ - ಒಪ್ಪಿಗೆ

೩. ಸತ್ಕರಿಸು - ಉಪಚರಿಸು

೪. ಪಂಡಿತ - ವಿದ್ವಾಂಸ

೫. ಹಾಸನ - ಗದ್ದುಗೆ

---

ಅ. ಒಂದು ವಾಕ್ಯದಲ್ಲಿ ಉತ್ತರಿಸಿ

1. ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದವರು ಯಾರು?
ಉತ್ತರ : ಕೃಷ್ಣದೇವರಾಯನ ಆಸ್ಥಾನಕ್ಕೆ ಬಂದವರು ವಿದ್ಯಾಸಾಗರನೆಂಬ ಮಹಾನ ಪಂಡಿತ.

2. ವಿದ್ಯಾಸಾಗರನು ಕೃಷ್ಣದೇವರಾಯನಿಗೆ ಹಾಕಿದ ಸವಾಲು ಯಾವುದು?
ಉತ್ತರ: ಕೃಷ್ಣದೇವರಾಯನ ಆಸ್ಥಾನದ ಪಂಡಿತರೊಡನೆ ವಾದ ಮಾಡಲು ಬಂದಿದ್ದೇನೆ ಎಂಬ ಸವಾಲು ಹಾಕಿದನು.

3. ವಿದ್ಯಾ ಸಾಗರನೊಂದಿಗೆ ವಾದ ಮಾಡಲು ಒಪ್ಪಿಕೊಂಡವರು ಯಾರು?
ಉತ್ತರ: ವಿದ್ಯಾಸಾಗರನೊಂದಿಗೆ ವಾದ ಮಾಡಲು ಒಪ್ಪಿಕೊಂಡವರು ತೆನಾಲಿ ರಾಮಕೃಷ್ಣ.

4. ತೆನಾಲಿ ರಾಮಕೃಷ್ಣನು ವಾದಕ್ಕೆ ಯಾವ ಗ್ರಂಥವನ್ನು ಆರಿಸಿಕೊಂಡನು?
ಉತ್ತರ: ತೆನಾಲಿ ರಾಮಕೃಷ್ಣನು ವಾದಕ್ಕೆ "ತಿಲಕಾಷ್ಠಮಹಿಷಬಂಧನ" ಎಂಬ ಗ್ರಂಥವನ್ನು ಆರಿಸಿಕೊಂಡನು.

---

ಆ. ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ವಿದ್ಯಾಸಾಗರನು ಕೃಷ್ಣದೇವರಾಯನ ಆಸ್ಥಾನಕ್ಕೆ ಏಕೆ ಬಂದನು?

ಉತ್ತರ: ಮಹಾಮೆದಾವಿಯಾದ ವಿದ್ಯಾಸಾಗರನು ಕೃಷ್ಣದೇವರಾಯನ ಆಸ್ಥಾನದ ಪಂಡಿತರೋಡನೆ ವಾದ ಮಾಡಲು ಬಂದನು.

2. ತಿಲಕಾಷ್ಠಮಹಿಷಬಂಧನ ಎಂದರೇನು?

ಉತ್ತರ: "ತಿಲಕಾಷ್ಠ ಎಂದರೆ ಎಳ್ಳಿನ ಕಡ್ಡಿಗಳು,ಮಹಿಷಬಂಧನ ಎಂದರೆ ಎಮ್ಮೆಗೆ ಕಟ್ಟುವ ಹಗ್ಗ" ಇದೇ ತಿಲಕಾಷ್ಠಮಹಿಷ ಬಂಧನ

---

Edit with WPS Office

ಉಕ್ತಲೇಖನ

1. ಮಹಾಪ್ರಭು 6. ಆಸ್ಥಾನ

2. ಬೇಗನೆ 7. ಅಪ್ಪಣೆ

3. ಸ್ವಾಮಿ 8. ಸಮಯ

4. ಗ್ರಂಥಗಳು 9. ವಿವೇಕ

5. ಪಲಾಯನ 10. ಸವಾಲು

---

Textbook activity

ಇ. ಕೊಟ್ಟಿರುವ ಮಾತನ್ನು ಯಾರು? ಯಾರಿಗೆ? ಹೇಳಿದರು?

1. 'ಈ ವಿಷಯ ಮೊದಲೇ ತಿಳಿದಿದ್ದರೆ ನಾನು ಇಲ್ಲಿಗೆ ಬರುತ್ತಲೇ ಇರಲಿಲ್ಲ'

ಉತ್ತರ : ಯಾರು?- ವಿದ್ಯಾಸಾಗರ

ಯಾರಿಗೆ?- ಪಂಡಿತರಿಗೆ

2. 'ಯಾವುದನ್ನು ಬೇಕಾದರೂ ಆರಿಸಿಕೊಳ್ಳಿ'

ಉತ್ತರ : ಯಾರು?- ವಿದ್ಯಾಸಾಗರ

ಯಾರಿಗೆ?- ತೆನಾಲಿ ರಾಮಕೃಷ್ಣನಿಗೆ

3. 'ಇದು ನಮ್ಮೂರಿನ ನಂದನ ಕಾಯುವ ಹುಡುಗರಿಗೂ ಗೊತ್ತು'.

ಉತ್ತರ: ಯಾರು?- ತೆನಾಲಿ ರಾಮಕೃಷ್ಣ

ಯಾರಿಗೆ?- ವಿದ್ಯಾಸಾಗರನಿಗೆ

4. ' ಮಹಾಪ್ರಭು ಎಕೋ ನನ್ನ ದೇಹಾರೋಗ್ಯ ಸರಿ ಇಲ್ಲ'.

ಉತ್ತರ : ಯಾರು?- ವಿದ್ಯಾಸಾಗರ

ಯಾರಿಗೆ?- ಕೃಷ್ಣದೇವರಾಯನಿಗೆ

---

ಭಾಷಾ ಚಟುವಟಿಕೆ

ಅ) ಮಾದರಿಯಂತೆ ಕೂಡಿಸಿ ಬರೆಯಿರಿ.

ಮಾದರಿ : ಎಮ್ಮೆ+ಗಳು = ಎಮ್ಮೆಗಳು

1. ಕಟ್ಟಿಗೆ + ಗಳು = ಕಟ್ಟಿಗೆಗಳು

Edit with WPS Office

2. ಮುಖ + ಗಳು = ಮುಖಗಳು

3. ಗ್ರಂಥ + ಗಳು = ಗ್ರಂಥಗಳು

4. ಕಣ್ಣು + ಗಳು = ಕಣ್ಣುಗಳು

---

ಆ) ಈ ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.

1. ನಾವು ಶಾಲೆಗೆ ಹೋಗುತ್ತೇನೆ.
ಉ - ನಾವು ಶಾಲೆಗೆ ಹೋಗುತ್ತೇವೆ.

2. ಶೀಲಾ ಕಥೆ ಬರೆಯುತ್ತಾನೆ.
ಉ - ಶೀಲಾ ಕಥೆ ಬರೆಯುತ್ತಾನೆ.

3. ಇಂದು ಮಳೆ ಬರುವ ಸಾಧ್ಯತೆ ಇವೆ.
ಉ - ಇಂದು ಮಳೆ ಬರುವ ಸಾಧ್ಯತೆ ಇದೆ.

4. ನಮ್ಮ ತರಗತಿಯಲ್ಲಿ ಹುಡುಗ ಇದ್ದಾರೆ.
ಉ - ನಮ್ಮ ತರಗತಿಯಲ್ಲಿ ಹುಡುಗ ಇದ್ದಾನೆ.

5. ಕಾಡಿನಲ್ಲಿ ಮರಗಳು ಇದೆ.
ಉ - ಕಾಡಿನಲ್ಲಿ ಮರಗಳು ಇವೆ.

Edit with WPS Office